# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 25 (80) |
| ಸದಸ್ಯರ ಹೆಸರು | ಶ್ರೀ ಹೆಚ್‌ಗೋಪಿನಾಥ್ .ಎಸ್ . (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.08.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ವಿದ್ಯಾರ್ಥಿ ವೇತನ ವಿತರಣೆಯಲ್ಲಿ ಉಂಟಾದ ವಿಳಂಬಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು: | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ 2023-24 ಮತ್ತು 2024-25ನೇ ಸಾಲಿಗೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಮಧ್ಯಂತರ ಆದೇಶದನುಸಾರ ಅರ್ಜಿ ಸಲ್ಲಿಸುವ ದಿನಾಂಕವನ್ನು ಆರ್ಥಿಕ ವರ್ಷ ಮುಕ್ತಾಯವಾದ ನಂತರವೂ ವಿಸ್ತರಿಸಲಾಗಿರುತ್ತದೆ ಹಾಗೂ 2025-26 ನೇ ಸಾಲಿನಲ್ಲಿ ಅರ್ಜಿ ಸಲ್ಲಿಸುವ ದಿನಾಂಕವನ್ನು ಆರ್ಥಿಕ ವರ್ಷ ಮುಕ್ತಾಯವಾದ ನಂತರವೂ ವಿಸ್ತರಿಸಲಾಗಿರುತ್ತದೆ.<br><br>ಈ ವಿದ್ಯಾರ್ಥಿಗಳ ಪೈಕಿ ಕೆಲವೊಂದು ವಿದ್ಯಾರ್ಥಿಗಳ ಹಿಂದಿನ ಶೈಕ್ಷಣಿಕ ವರ್ಷದ ಫಲಿತಾಂಶದ ವಿವರಗಳು, ಕೌನ್ಸಲಿಂಗ್ ದತ್ತಾಂಶಗಳನ್ನು ಸಂಬಂಧಿಸಿದ ವಿಶ್ವವಿದ್ಯಾಲಯಗಳು ನೀಡಿರುವುದಿಲ್ಲ ಹಾಗೂ ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿ ಕೊಂಡಿರುವುದಿಲ್ಲ. ಈ ಕಾರಣಗಳಿಂದ ಈ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲು ಸಾಧ್ಯವಾಗಿರುವುದಿಲ್ಲ.<br><br>ಮುಂದುವರೆದು ಈ ರೀತಿಯ ಸಮಸ್ಯೆಗಳಿಂದ ಶುಲ್ಕ ಮರು ಪಾವತಿ ಮಾಡಲು ಸಾಧ್ಯವಾಗದೆ ಇರುವ ವಿದ್ಯಾರ್ಥಿಗಳಿಗೆ ತಮ್ಮ ಹಿಂದಿನ ವರ್ಷದ ಶೈಕ್ಷಣಿಕ ದತ್ತಾಂಶ, ಆಧಾರ್ ನೇಮ್ ,ಆಧಾರ್ ಲಿಂಕ್ ಮತ್ತು ಕೌನ್ಸಲಿಂಗ್ ದತ್ತಾಂಶಗಳನ್ನು ಅಪ್ ಡೇಟ್ ಮಾಡಿಕೊಳ್ಳುವಂತೆ ತಿಳಿಸಿ 2025-26 ನೇ ಸಾಲಿನಲ್ಲಿ ಪತ್ರಿಕಾ ಪ್ರಕಟಣೆ, ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಿಂದ ದೂರವಾಣಿ ಕರೆ ಮತ್ತು ಮೊಬೈಲ್ ಸಂದೇಶ ಕಳುಹಿಸಿ ಸದರಿ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಲು ವಿದ್ಯಾರ್ಥಿಗಳು ಹಾಗೂ ತಾಲ್ಲೂಕು/ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಲಾಗಿನ್‌ಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. |

<table>
<tr>
<td></td>
<td></td>
<td>
ಸದರಿ ಸಮಸ್ಯೆಗಳನ್ನು ಬಗೆ ಹರಿಸಿಕೊಂಡ ವಿದ್ಯಾರ್ಥಿಗಳಿಗೆ 2025-26 ನೇಸಾಲಿನಲ್ಲಿ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ವರ್ಷಾವಾರು ಈ ಕೆಳಕಂಡಂತೆ ಶುಲ್ಕ ಮರುಪಾವತಿ ಮಾಡಲಾಗಿರುತ್ತದೆ.
<table>
<tr><th>ವರ್ಷ</th><th>ಪಾವತಿ ಮಾಡಲಾದ ವಿದ್ಯಾರ್ಥಿಗಳ ಸಂಖ್ಯೆ</th><th>ಪಾವತಿ ಮಾಡಲಾದ ವಿದ್ಯಾರ್ಥಿ ವೇತನ (ರೂ.ಕೋಟಿಗಳಲ್ಲಿ)</th></tr>
<tr><td>2023-24</td><td>25962</td><td>60.54</td></tr>
<tr><td>2024-25</td><td>133406</td><td>136.80</td></tr>
<tr><td>2025-26</td><td>227215</td><td>305.79</td></tr>
<tr><td>ಒಟ್ಟು</td><td>386583</td><td>503.13</td></tr>
</table>
</td>
</tr>
<tr>
<td>ಆ)</td>
<td>ಪ್ರಸ್ತುತ ಆರ್ಥಿಕ ವರ್ಷದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನಗಳ ಒಟ್ಟು ಅನುದಾನ ಎಷ್ಟು:</td>
<td>
2026-27 ನೇ ಸಾಲಿನ ಆಯವ್ಯಯದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳಡಿ ನಿಗದಿ ಪಡಿಸಿರುವ ಅನುದಾನದ ವಿವರಗಳು ಕಾರ್ಯಕ್ರಮವಾರು ಈ ಕೆಳಕಂಡಂತಿರುತ್ತವೆ
<table>
<tr><th>ಕಾರ್ಯಕ್ರಮದ ಹೆಸರು</th><th>ನಿಗದಿ ಪಡಿಸಿರುವ ಅನುದಾನ (ರೂ.ಕೋಟಿಗಳಲ್ಲಿ)</th></tr>
<tr><td>ಕೇಂದ್ರ ಪುರಸ್ಕೃತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ</td><td>100.00</td></tr>
<tr><td>ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ</td><td>250.00</td></tr>
<tr><td>ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ</td><td>110.00</td></tr>
<tr><td>ಶುಲ್ಕ ಮರು ಪಾವತಿ</td><td>700.00</td></tr>
<tr><td>ಅಲೆಮಾರಿ/ಅರೆ-ಅಲೆಮಾರಿ ಜನಾಂಗ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ</td><td>27.00</td></tr>
<tr><td>ಒಟ್ಟು</td><td>1187.00</td></tr>
</table>
</td>
</tr>
<tr>
<td>ಇ)</td>
<td>ವಿದೇಶ ವಿದ್ಯಾಭ್ಯಾಸಕ್ಕಾಗಿ ನೀಡಲಾಗಿರುವ ವಿದ್ಯಾರ್ಥಿ ವೇತನ ಯೋಜನೆಗಳ ಫಲಾನುಭವಿಗಳ ಸಂಖ್ಯೆ ಎಷ್ಟು:</td>
<td>ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯದ ಜೊತೆಗೆ ಶೈಕ್ಷಣಿಕವಾಗಿ ಪೂರಕವಾಗಿ ಅಗತ್ಯ ಸೌಲಭ್ಯಗಳಾದ ನೈಟ್‌ಡ್ರೆಸ್ ಮತ್ತು ಟ್ರಾಕ್‌ಸೂಟ್, ಪಠ್ಯ-ಪುಸ್ತಕ, ಲೇಖನ ಸಾಮಗ್ರಿಗಳು, ಶುಚಿ-ಸಂಭ್ರಮಕಿಟ್, ವೈದ್ಯಕೀಯ ಸೌಲಭ್ಯ, ದಿನಪತ್ರಿಕೆ, ಕ್ರೀಡಾ ಸಾಮಗ್ರಿಗಳು, ಹಾಸಿಗೆ -ಮಂಚ, ಕಠಿಣ ವಿಷಯಗಳ ಭೋದನೆಗೆ ಅಲ್ಪಕಾಲಿಕ ಭೋದಕರ ವ್ಯವಸ್ಥೆ, ಜಮಖಾನ-ಬೆಡ್‌ಶೀಟ್, ಮ್ಯಾಗಜಿನ್, ಶೈಕ್ಷಣಿಕ ಪೂರಕವಾಗಿ</td>
</tr>
</table>

..3

ನಿಲಯಗಳಲ್ಲಿ ವ್ಯಕ್ತಿತ್ವವಿಕಸನ, ವೃತ್ತಿ ಬುನಾದಿ ತರಬೇತಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಿಳುವಳಿಕೆ/ ಮಾರ್ಗದರ್ಶನ ನೀಡುವ ಸಲುವಾಗಿ ಕಾರ್ಯಾಗಾರವನ್ನು ಆಯೋಜಿಸಲಾಗುತ್ತಿದೆ. ಅನುದಾನದ ಲಭ್ಯತೆಯನುಸಾರ ಅತ್ಯಂತ ಅವಶ್ಯಕವಿರುವ ಮೂಲ ಭೂತಸೌಕರ್ಯಗಳನ್ನು ಕಲ್ಪಿಸಲಾಗುವುದು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕೆಳಕಂಡಂತೆ ಒಟ್ಟು 2712 ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 424 ನಿವೇಶನಗಳು ಲಭ್ಯವಿರುತ್ತವೆ.

| ಕ್ರ.ಸಂ | ವಿದ್ಯಾರ್ಥಿ ನಿಲಯಗಳು | ಸಂಖ್ಯೆ |
|---|---|---|
| 1. | ಸ್ವಂತ | 1642 |
| 2. | ಬಾಡಿಗೆ | 787 |
| 3. | ಉಚಿತ | 283 |
| | ಒಟ್ಟು | 2712 |

2026-27ನೇ ಸಾಲಿನ ಆಯವ್ಯಯ ಘೋಷಣೆಯಂತೆ ರೂ.5.00 ಕೋಟಿ ಘಟಕ ವೆಚ್ಚದಲ್ಲಿ 50 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ.

ಈ) ಹಿಂದುಳಿದ ವರ್ಗಗಳ ವಸತಿ ನಿಲಯಗಳ ಸ್ಥಿತಿ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಯೋಜನೆಗಳೇನು?

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯದ ಜೊತೆಗೆ ಶೈಕ್ಷಣಿಕವಾಗಿ ಪೂರಕವಾಗಿ ಅಗತ್ಯ ಸೌಲಭ್ಯಗಳಾದ ನೈಟ್‌ಡ್ರೆಸ್ ಮತ್ತು ಟ್ರಾಕ್ ಸೂಟ್, ಪಠ್ಯ-ಪುಸ್ತಕ, ಲೇಖನ ಸಾಮಗ್ರಿಗಳು, ಶುಚಿ-ಸಂಭ್ರಮ ಕಿಟ್, ವೈದ್ಯಕೀಯ ಸೌಲಭ್ಯ, ದಿನಪತ್ರಿಕೆ, ಕ್ರೀಡಾ ಸಾಮಗ್ರಿಗಳು, ಹಾಸಿಗೆ -ಮಂಚ, ಕಠಿಣ ವಿಷಯಗಳ ಭೋದನೆಗೆ ಅಲ್ಪಕಾಲಿಕ ಭೋದಕರವ್ಯವಸ್ಥೆ, ಜಮಖಾನ - ಬೆಡ್‌ಶೀಟ್, ಮ್ಯಾಗಜಿನ್, ಶೈಕ್ಷಣಿಕ ಪೂರಕವಾಗಿ ನಿಲಯಗಳಲ್ಲಿ ವ್ಯಕ್ತಿತ್ವ ವಿಕಸನ, ವೃತ್ತಿ ಬುನಾದಿ ತರಬೇತಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಿಳುವಳಿಕೆ/ ಮಾರ್ಗದರ್ಶನ ನೀಡುವ ಸಲುವಾಗಿ ಕಾರ್ಯಾಗಾರವನ್ನು ಆಯೋಜಿಸಲಾಗುತ್ತಿದೆ. ಅನುದಾನದ ಲಭ್ಯತೆಯನುಸಾರ ಅತ್ಯಂತ ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕೆಳಕಂಡಂತೆ ಒಟ್ಟು 2712 ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 424 ನಿವೇಶನಗಳು ಲಭ್ಯವಿರುತ್ತವೆ.

| ಕ್ರ.ಸಂ | ವಿದ್ಯಾರ್ಥಿ ನಿಲಯಗಳು | ಸಂಖ್ಯೆ |
|---|---|---|
| 1. | ಸ್ವಂತ | 1642 |
| 2. | ಬಾಡಿಗೆ | 787 |
| 3. | ಉಚಿತ | 283 |
| | ಒಟ್ಟು | 2712 |

2026-27ನೇ ಸಾಲಿನ ಆಯವ್ಯಯ ಘೋಷಣೆಯಂತೆ ರೂ.5.00 ಕೋಟಿ ಘಟಕ ವೆಚ್ಚದಲ್ಲಿ 50 ಮೆಟಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ.

**ಸಂಖ್ಯೆ:ಹಿಂವಕ 596 ಬಿಎಂಎಸ್ 2026**

**(ಶಿವರಾಜ. ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.